ಕಡಿಮೆ ಗೃಹ ನಿರ್ಮಾಣ ಯೋಜನೆಗಳು

2095 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಡಿಮೆ ವೆಚ್ಚದ ಗೃಹ ನಿರ್ಮಾಣದ ಯೋಜನೆಗಳನ್ನೇನಾದರೂ ಹಮ್ಮಿಕೊಂಡಿದೆಯೇ?

ಆ) ಹಾಗಿದ್ದಲ್ಲಿ, ಅವುಗಳ ವಿವರಗಳನ್ನು ಒದಗಿಸುವುದು

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) 1991-92ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಳಿಯು 10,000 ಮನೆಗಳನ್ನು ಆರ್ಥಿಕವಾಗಿ ಹಿಂದುಳಿದ ಮತ್ತು ಅಲ್ಪ ಆದಾಯ ವರ್ಗದವರಿಗಾಗಿ ಕಟ್ಟುವ ಯೋಜನೆ ಇದೆ. ಮತ್ತು ತಿಪಟೂರಿನಲ್ಲಿ ಬೆಂಕಿ ಅನಾಹುತಕ್ಕೆ ಒಳಗಾದ ಜನರಿಗಾಗಿ 90 ಮನೆಗಳನ್ನು ಕಟ್ಟಲು ಯೋಜನೆ ಹಾಕಿಕೊಂಡಿದೆ. ಇದೇ ಸಾಲಿನಲ್ಲಿ ಹೊಸ ವಸತಿ ಯೋಜನೆಯನ್ವಯ ರಾಜ್ಯ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ (ಬೆಂಗಳೂರುನಗರವನ್ನು ಹೊರತುಪಡಿಸಿ) ರಾಜ್ಯದ ಎಲ್ಲಾ ನಗರ ಪ್ರದೇಶಗಳಲ್ಲಿ 30,000 ಮನೆಗಳನ್ನು ತಲಾ ರೂ.16,000 ಗಳ ವೆಚ್ಚದಲ್ಲಿ ನಿರ್ಮಿಸಲು ಹಾಗೂ ಬೆಂಗಳೂರು ನಗರ ಪ್ರದೇಶಗಳಲ್ಲಿ ಕೊಳಚೆವಾಸಿಗಳಿಗೆ ಪುನರ್‌ವಸತಿ ನಿರ್ಮಿಸಲು ತಲಾ ರೂ. 33,000 ವೆಚ್ಚದಲ್ಲಿ 30,000 ಎಲ್‌ಐಜಿ 2 ಮನೆಗಳನ್ನು ನಿರ್ಮಿಸಲು ಕಾರ್ಯಕ್ರಮ ಹಮ್ಮಿಕ್ಕೊಂಡಿದೆ.

ಬೆಂಗಳೂರು ನಗರಪಾಲಿಕೆಗೆ ಹೊಸದಾಗಿ ಸೇರಿದ ಬಡಾವಣೆಗಳ ಸಂಖ್ಯೆ

1824 - ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರಪಾಲಿಕೆಗೆ ಹೊಸದಾಗಿ ಸೇರಿಸಿಕೊಂಡ ಬಡಾವಣೆಗಳೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿಸಚಿವರು)

1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ 89 ಬಡಾವಣೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಕೊಡಲು ಸಂಖ್ಯೆ ವನಇ 338 ಎಂಎನ್‌ಎಕ್ಸ್ 89 ದಿನಾಂಕ 24-7-91ರಂದು ಅಧಿಸೂಚನೆಯಲ್ಲಿ ಹೊರಡಿಸಲಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯು ಮೇಲ್ಕಂಡ ಬಡಾವಣೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿರುವುದಿಲ್ಲ.

ರಾಜ್ಯದ ಪುರಸಭೆಗಳ ವರಮಾನ

2121 ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪುರಸಭೆಗಳ ವರಮಾನದ ಬಗ್ಗೆ ಸರ್ಕಾರವು ವಿಶೇಷವಾಗಿ ಚಿಂತಿಸಿದೆಯೇ

ಆ) ಅನೇಕ ಪುರಸಭೆಗಳು ಸಾಕಷ್ಟು ವರಮಾನವಿಲ್ಲದೇ ನಾಗರೀಕರಿಗೆ ಕನಿಷ್ಠ ಸವಲತ್ತುಗಳನ್ನು ಕೂಡಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇಂತಹ ಪುರಸಭೆಗಳಿಗೆ ಸರ್ಕಾರದವರು ಹಣ ಸಂದಾಯವನ್ನು ಮಾಡಲಾಗಿದೆಯೇ.